


ಅದು ಕಾಲೇಜಿನ ಮೊದಲ ದಿನ. ಯುವತಿ, ಯುವಕರಿಂದ ಕಾಲೇಜ್ ಕ್ಯಾಂಪಸ್ ತುಂಬಿ ತುಳುಕಾಡುತ್ತಿತ್ತು. ಸುತ್ತಮುತ್ತಲಿನ ವಾತಾವರಣ ಉಲ್ಲಾಸ, ಉತ್ಸಾಹದಿಂದ ಕಿಲಕಿಲ ನಗುತ್ತಿತ್ತು. ಆಫೀಸ್ ರೂಮ್ ಕಡೆ ಹೋಗ್ತಾ ಇದ್ದ ನನ್ನನ್ನು ಚಂದದ ಹುಡುಗಿಯೊಬ್ಬಳು 'ಹಾಯ್! .. ನಾನು ಹಂಸಿಕಾ.. ಫಸ್ಟ್ ಇಯರ್, ಮತ್ತೆ ನೀವು?' ಎಂದಳು.

ಒಂದು ಕ್ಷಣ ಏನೆನ್ನಬೇಕೋ ತಿಳಿಯಲಿಲ್ಲ. ಸ್ವಲ್ಪ ಸುಧಾರಿಸಿಕೊಂಡ ಮೇಲೆ, 'ನಾನು ನನ್ನ ಮಗಳ ಫೀಸ್ ಕಟ್ಟಲು ಬಂದಿದೀನಮ್ಮಾ..!'

ಸಂತೂರ್ ಸೋಪಿನಿಂದ ಅಮ್ಮ ಮಾತ್ರ ಅಲ್ಲ, ಆಗಾಗ ಅಪ್ಪ ಕೂಡಾ ಸ್ನಾನ ಮಾಡ್ತಾರೆ!

ಎಲ್‌ಐಸಿಯಲ್ಲಿ ನೌಕರಿ ಮಾಡುತ್ತಿದ್ದ ಮಹಿಳೆಯೊಬ್ಬಳು, ಒಬ್ಬ ಚಿತ್ರಕಾರನ ಹತ್ತಿರ ಹೋಗಿ ತನ್ನ ಪೊಟ್ರೇಟ್ ಮಾಡಲು ಕೇಳಿಕೊಂಡಳು.

ಅಲ್ಲದೇ ಆ ಚಿತ್ರದಲ್ಲಿ ತಾನು 10 ಲಕ್ಷ ರೂಪಾಯಿ ಮೌಲ್ಯದ 'ನೆಕ್ಲೆಸ್' ಧರಿಸಿದಂತೆ, ಅದು ಎಲ್ಲರಿಗೂ ಎದ್ದು ಕಾಣುವಂತೆ ಚಿತ್ರಿಸಬೇಕೆಂದು ಕೇಳಿಕೊಂಡಳು.

ಚಿತ್ರಕಾರ: ಅರ್‍ರೇ ಮೇಡಮ್, ನಿಮ್ಮ ಕತ್ತಿನಲ್ಲಿ ನೆಕ್ಲೆಸ್ ಇಲ್ವಲ್ಲ. ಆದ್ರೂ ಏಕ ನೆಕ್ಲೆಸ್ ಹಾಕ್ಕೊಂಡಂಗ ಚಿತ್ರ ಬರೀಬೇಕು ಎಂದು ಹೇಳುತ್ತಿದ್ದೀರಿ?

ಮಹಿಳೆ: ನೋಡಪ, ಅಕಸ್ಮಾತ್ ನನಗೇನಾದರೂ ತೊಂದರೆ ಆಗಿ ಸತ್ತು ಹೋದರೆ ನನ್ನ ಗಂಡ ಇನ್ನೊಂದು ಮದುವೆ ಆಗೋದು ಗ್ಯಾರಂಟಿ. ಆತನ ಹೊಸ ಹೆಂಡತಿ ಗೋಡೆ ಮೇಲಿರುವ ಈ ನನ್ನ ಫೋಟೊ ನೋಡಿ, ಆ ನೆಕ್ಲೆಸ್ ಹುಡುಕುತ್ತಾಳೆ. ಅದು ಸಿಗಲಿಲ್ಲ ಎಂದು ಗಂಡನನ್ನು ನೆಕ್ಲೆಸ್ ಬಗ್ಗೆ ಕೇಳೇ ಕೇಳ್ತಾಳೆ. ಅವನು ಇರಲಾರದ ನೆಕ್ಲೆಸ್ ಎಲ್ಲಿಂದ ತಂದು ಕೊಡ್ತಾನ? ಆವಾಗ ಇಬ್ರೂ ಜಗಳ ಆಡ್ತಾರ. ಅದನ್ನ ನೋಡಿ ನನ್ನ ಆತ್ಮಕ್ಕೆ ಶಾಂತಿ ಸಿಗ್ತದ.

ಇದನ್ನೇ 'ಆನಂದ' ಪಾಲಿಸಿ ಅಂತ ಕರೆಯೋದು. 'ಜಿಂದಗೀ ಕೆ ಸಾಥ್ ಭೀ, ಜಿಂದಗೀ ಕೆ ಬಾದ್ ಭೀ'.

***

ಗಂಡ ಹೆಂಡತಿ ಅನ್ಯೋನ್ಯವಾಗಿ ಬಾಳುತ್ತಿದ್ದರು. ಕೆಲವು ವರ್ಷಗಳ ನಂತರ ಹೆಂಡತಿಗೆ ಗಂಡನ ಪ್ರೀತಿಯ ಬಗ್ಗೆ ಅನುಮಾನ ಶುರುವಾಯಿತು. ಸದಾಕಾಲ ಗಂಡನ ಪ್ರೀತಿ ನನ್ನ ಮೇಲೆ ಇರಬೇಕು ಎಂಬ ಆಸೆಯಿಂದ ಭಗವಂತನಲ್ಲಿ ವರನನ್ನು ಬೇಡಲು ತಪಸ್ಸಿಗೆ ಕುಳಿತಳು.

ಆಕೆಯ ತಪಸ್ಸಿಗೆ ಮೆಚ್ಚಿ ದೇವರು ಪ್ರತ್ಯಕ್ಷನಾದ.

ಅವಳು ದೇವರಲ್ಲಿ 5 ವರಗಳನ್ನು ಕೇಳಿದಳು.

1) ಗಂಡ ನನ್ನ ಬಿಟ್ಟು ಎಲ್ಲಿಗೂ ಹೋಗಬಾರದು.

2) ನನ್ನ ಗಂಡನ ಜೀವನದಲ್ಲಿ ನಾನೆ ಮಹತ್ವಪೂರ್ಣ ಆಗಿರಬೇಕು.

3) ಅವನಿಗೆ ನಿದ್ದೆ ಬಂದಾಗ ನಾನು ಪಕ್ಕದಲ್ಲೇ ಇರಬೇಕು.

4) ಬೆಳಿಗ್ಗೆ ಅವನು ಕಣ್ಣು ಬಿಟ್ಟಾಗ ಮೊದಲು ನನ್ನನ್ನೆ ನೋಡಬೇಕು.

5) ನನಗೆ ಏನಾದ್ರೂ ತೊಂದರೆ ಆದರೆ ಅವನ ಜೀವ ಹೋದಂಗೆ ಆಗಬೇಕು.

ದೇವರು: ನೋಡಮ್ಮ, ಈ ಕಲಿಗಾಲದಲ್ಲಿ ಗಂಡನನ್ನು ಶ್ರೀರಾಮನಾಗಿ ಮತ್ತು ಹೆಂಡತಿಯನ್ನು ಸೀತೆಯಾಗಿ ಊಹಿಸಿಕೊಳ್ಳುವುದು ಕಷ್ಟ. ಮತ್ತೊಮ್ಮೆ ಯೋಚಿಸಿ ವರ ಕೇಳು.

ಆಕೆ: ಇಲ್ಲ, ನನಗೆ ಆ ಐದು ವರಗಳೇ ಬೇಕು.

ದೇವರು: 'ತಥಾಸ್ತು' ಎಂದು ಮಾಯವಾದ.

ಹೆಂಡತಿ ಆಗಿದ್ದ ಆಕೆ ಒಂದು ಮೊಬೈಲ್ ಫೋನ್ ಆಗಿ ಬದಲಾಗಿ ಅವನ ಕೈ ಸೇರಿದಳು.

— ಸಂಗ್ರಹ: ವಿಜಯಕುಮಾರ್ ಎಚ್.ಕೆ.

ಕೊರೊನಾ ಜೊತೆಗೆ ಬರ್ಡ್ ಫ್ಲೂ ಹರಡುತ್ತಿರುವುದು ತಿಮ್ಮನ ಮನೆಯ ಕೋಳಿಗಳಿಗೆ ತಿಳಿಯಿತು.

ಸಾಕಷ್ಟು ಓದಿಕೊಂಡಿದ್ದ ಅವು ಕೊರೊನಾ ಕಾಲದಲ್ಲಿ ನಿತ್ಯವೂ ಟೀವಿ ನ್ಯೂಸ್ ನೋಡುತ್ತಿದ್ದವು. ಬರ್ಡ್ ಫ್ಲೂ ಹರಡುತ್ತಿರುವ ಸಂಗತಿ ಗೊತ್ತಾಗುತ್ತಲೇ ಮನೆಯಿಂದ ಹೊರಗೋಡಿ ಬಂದ ಅವು, ತಟ್ಟೆಸೌಟು ಹಿಡಿದು ಬಾರಿಸುತ್ತ ಕೂಗಲಾರಂಭಿಸಿದವು 'ಗೋ ಬರ್ಡ್ ಫ್ಲೂ ಗೋ ಗೋ ಬರ್ಡ್ ಫ್ಲೂ ಗೋ...'

***

ಮನೋವೈದ್ಯ: ಸಂಸಾರದಲ್ಲಿ ಸುಖವಾಗಿರಬೇಕು ಎಂದರೆ ನಿಮ್ಮನ್ನು ಅರ್ಥ ಮಾಡಿಕೊಳ್ಳುವ ವ್ಯಕ್ತಿಯನ್ನು ಮದುವೆಯಾಗಿ.

ಗುಂಡ: ನನ್ನನ್ನು ನಾನೇ ಹೇಗೆ ಮದುವೆಯಾಗಲಿ ಡಾಕ್ಟ್ರೆ?

***

ಮದ್ಯಪ್ರಿಯ ರಮೇಶ ಉವಾಚ ಮದ್ಯಪಾನ ಚಟ ಬಿಡುವುದು ಹೇಗೆ ಪುಸ್ತಕ ಓದಿ ನನಗೆ ನನ್ನ ಬಗ್ಗೆಯೇ ತುಂಬಾ ಜಿಗುಪ್ಸೆ ಉಂಟಾಯಿತು. ಮದ್ಯದ ಪರಿಣಾಮಗಳ ಬಗ್ಗೆ ಗೊತ್ತಾಯಿತು. ಹಾಗಾಗಿ ನಾನು ಆ ಪುಸ್ತಕ ಓದುವುದನ್ನು ಬಿಟ್ಟು ಬಿಟ್ಟೆ !

***

ಹೊಸ ವರ್ಷ ಹಾಗೂ ಎಲ್ಲ ಹಬ್ಬಗಳಂದು ಅತ್ಯಂತ ಹೆಚ್ಚು ಕಳಿಸಲ್ಪಡುವ ಸಂದೇಶ 'ವಿಶ್ ಯೂ ದ ಸೇಮ್'.

—ಸುಘೋಷ ಸ ನಿಗಳೆ

